ಮಹಾದೇವ ದೇಸಾಯಿಯವರು ಬಾಪೂ ಅವರ ಒಂದೊಂದು ಶಬ್ದವನ್ನೂ ಹಾಳೆಯಲ್ಲಿ ಬರೆದರು. ನಂತರ ಅವರು ಬಾ ಅವರನ್ನು ನೋಡಿದರು. ಬಾ ಅವರ ಮುಖದಲ್ಲಿ ವೇದನೆಯೊಂದಿಗೆ ಶಾಂತಿ ಸಹ ನೆಲೆಸಿತ್ತು.

ಪತ್ರವನ್ನು ಓದಿ ಬಾಪೂ ಅವರು ಕೊನೆಯಲ್ಲಿ ಸಹಿ ಮಾಡಿ, ನಂತರ ಹೇಳಿದರು

'ಹರಿಲಾಲ ಒಂದು ವೇಳೆ ಮರಳಿ ಬಂದರೆ ಅದಕ್ಕಾಗಿ ನಲ್ವತ್ತೆರಡು ದಿನಗಳ ಕಾಲ ಉಪವಾಸವನ್ನು ಮಾಡುತ್ತೇನೆ...'

ಬಾ ಅವರ ಕಣ್ಣುಗಳು ಮತ್ತೆ ತುಂಬಿ ಬಂದವು. ಬಾಪೂ ಚರಕವನ್ನು ತೆರೆದರು.

* * *

ಹರಿಲಾಲನಿಗೆ ಬಾಪೂ ಅವರ ಈ ಪತ್ರ ಸಿಕ್ಕಾಗ, ಅವನು ನಿಜಾಮಿಯಾ ಹೊಟೇಲ್‌ನ ಒಂದು ಮೂಲೆಯಲ್ಲಿ ಮೂರ್ನಾಲ್ಕು ಜೊತೆಗಾರರೊಂದಿಗೆ ಕೂತು ಸಾರಾಯಿ ಕುಡಿಯುತ್ತಿದ್ದ. ಅಂಚೆಯಿಂದ ಪತ್ರ ಮಧ್ಯಾಹ್ನವೇ ಬಂದಿತ್ತು, ಆದರೆ ಹರಿಲಾಲ ತನ್ನ ಹಾಸಿಗೆಯ ಬಳಿ ಹೋಗಿರಲಿಲ್ಲ.

ಹೊಟೇಲ್‌ನ ನೌಕರನೊಬ್ಬ ಆ ಪತ್ರವನ್ನು ಅವನ ಹಾಸಿಗೆಯ ಬಳಿ ಇಟ್ಟಿದ್ದ. ಹರಿಲಾಲ ವೇಶ್ಯಾಲಯಕ್ಕೆ ಹೋಗುವ ಸಿದ್ಧತೆಯಲ್ಲಿದ್ದ. ಆಗ ಯಾರೋ ಬಂದು ಆ ಪತ್ರವನ್ನು ಅವನಿಗೆ ಕೊಟ್ಟರು. ಬಾಪೂ ಅವರ ಪತ್ರವನ್ನು ನೋಡಿ ಹರಿಲಾಲನಿಗೆ ಗಾಬರಿಯಾಯಿತು. ನಾಲ್ಕು ದಿನಗಳ ಹಿಂದಿನ ಆ ಕ್ಷಣಗಳು ಕಳೆದು ಹೋಗಿದ್ದವು. ದೇಹ ಅಮಲಿನಿಂದಾಗಿ ಕಂಪಿಸುತ್ತಿತ್ತು, ಕಣ್ಣುಗಳೆದುರು ವೇಶ್ಯಾಲಯದ ಬಣ್ಣಬಣ್ಣದ ದೃಶ್ಯಗಳು ಮೂಡುತ್ತಿದ್ದವು. ಅವನು ಜೊತೆಗಾರರನ್ನು ನೋಡಿದ. ಏನೋ ಯೋಚಿಸಿದ. ಜೇಬಿನಲ್ಲಿ ಹಣವಿಲ್ಲದೆ ಅದೆಷ್ಟೋ ದಿನಗಳಾಗಿದ್ದವು. ಆಗುತ್ತಿದ್ದ ಖರ್ಚುಗಳು ವಜೀರ್ ಮುಹಮ್ಮದನ ಕೃಪೆಯಿಂದಾಗಿ ಭರಿಸಲ್ಪಡುತ್ತಿದ್ದವು. ಇನ್ನು ಈ ಕೃಪೆ ಎಷ್ಟು ದಿನಗಳು ನಡೆಯಲು ಸಾಧ್ಯವಿತ್ತು? ಒಂದು ವೇಳೆ ತಕ್ಷಣ ಹಣಕ್ಕೆ ವ್ಯವಸ್ಥೆಯಾಗದಿದ್ದರೆ, ಇಲ್ಲಿಂದ ಗಂಟುಮೂಟೆಯನ್ನು ಕಟ್ಟಿಕೊಂಡು ಹೊರಡಬೇಕಿತ್ತು.

ಹರಿಲಾಲ ರೇಗಿ ಸಾರಾಯಿ ತುಂಬಿದ್ದ ಗ್ಲಾಸನ್ನು ಎತ್ತಿ ಒಂದೇ ಗುಟುಕಿಗೆ ಕುಡಿದು ಖಾಲಿ ಮಾಡಿದ, ನಂತರ ಕೊಳಕು ನಗೆಯನ್ನು ಸೂಸುತ್ತಾ ಎದ್ದು ನಿಂತ. ಚೀಲದಿಂದ ತಕ್ಷಣ ಹಾಳೆಯನ್ನು ತೆಗೆದು ಬಾಪೂ ಅವರ ಪತ್ರಕ್ಕೆ ಉತ್ತರವನ್ನು ಬರೆದ

'...ನನ್ನ ಪರಿಸ್ಥಿತಿ ಎಷ್ಟು ಬಿಗಡಾಯಿಸಿದೆ ಎಂದರೆ ನಾನು ಇಲ್ಲಿಂದ ಹೊರಡುವುದೇ ಕಷ್ಟವಾಗಿದೆ. ಪತ್ರದ ಮೂಲಕ ನೀವೇನು ಆದೇಶವನ್ನು ಕೊಡಲು ಬಯಸುವಿರೋ, ಅದನ್ನು ಕೊಡಿ ಎಂದು ನಿಮ್ಮಲ್ಲಿ ಪ್ರಾರ್ಥಿಸುತ್ತೇನೆ. ಈ ಉಪವಾಸದ ಔಚಿತ್ಯದಲ್ಲಿ ಹಾಗೂ ಇದರ ಯಶಸ್ಸಿನ ಬಗ್ಗೆ ನನಗೆ ಸಂಪೂರ್ಣ ಶ್ರದ್ಧೆಯಿದೆ.'

ಪತ್ರವನ್ನು ಅಂಚೆ ಡಬ್ಬಿಗೆ ಹಾಕಿದ ಹರಿಲಾಲ ತನ್ನ ಜೊತೆಗಾರರೊಂದಿಗೆ ನಿರ್ಧರಿಸಲ್ಪಟ್ಟ ಕಾರ್ಯಕ್ರಮಕ್ಕೆ ಹೊರಟ.

* * *

ಮರುದಿನ ಬೆಳಿಗ್ಗೆ ಹೊಟೇಲ್‌ಗೆ ಹರಿಲಾಲ ಮರಳಿ ಬಂದಾಗ ಅವನ ಅಮಲು ಇಳಿದಿತ್ತು. ಮುಂಬೈ ಇನ್ನೂ ನಿಶ್ಶಬ್ದವಾಗಿತ್ತು, ಪ್ರಾತಃಕಾಲದ ಮೊದಲ ಕಿರಣಗಳು ಇನ್ನೂ ಆಗಸದಲ್ಲಿ ವ್ಯಾಪಿಸಿದ್ದವು. ಹರಿಲಾಲ ಒಂದೇ ಕ್ಷಣದಲ್ಲಿ ಏನೋ ತೀರ್ಮಾನಿಸಿದ. ಚೀಲದಲ್ಲಿ ಬಟ್ಟೆಗಳನ್ನು ತುಂಬಿದ. ಶಾಲನ್ನು ಹೆಗಲ ಮೇಲೆ ಹಾಕಿಕೊಂಡು, ಯಾರಿಗೂ ತಿಳಿಯದಂತೆ ಬೋರಿಬಂದರ್ ಸ್ಟೇಷನ್‌ಗೆ ವೇಗವಾಗಿ ಹೆಜ್ಜೆಗಳನ್ನು ಹಾಕಿದ.

## ಮೂವತ್ತೆರಡು

ಬೋರಿಬಂದರ್ ಸ್ಟೇಷನ್‌ನಲ್ಲಿ ಉತ್ತರ, ದಕ್ಷಿಣ ಮತ್ತು ಪೂರ್ವ ದಿಕ್ಕಿನೆಡೆಗೆ ಹೋಗುವ ರೈಲುಗಳು ಬೇರೆಬೇರೆ ಪ್ಲಾಟ್‌ಫಾರ್ಮ್‌ನಲ್ಲಿ ನಿಂತಿದ್ದವು. ಗುಂಪು ಮತ್ತು ಜನರ ಆವಾಗಮನಕ್ಕೆ ಕೊನೆಯೇ ಇರಲಿಲ್ಲ. ಬೆಳ್ಳಂಬೆಳಿಗ್ಗೆ ಪತ್ರಿಕೆಗಳನ್ನು ಮಾರುವ ಹುಡುಗರು ಗಟ್ಟಿ ಧ್ವನಿಯಲ್ಲಿ ಕೂಗುತ್ತಾ ಅತ್ತಇತ್ತ ದೌಡಾಯಿಸುತ್ತಿದ್ದರು:

'ಮಹಾತ್ಮಾ ಗಾಂಧಿಯವರ ಮುಂದುವರೆಯುತ್ತಿರುವ ಉಪವಾಸ...'

'ಉಪವಾಸದಿಂದಾಗಿ ಚಿಂತಾಜನಕವಾಗುತ್ತಿರುವ ಬಾಪೂ ಅವರ ಆರೋಗ್ಯ...'

'ರಾಷ್ಟ್ರಪಿತನ ಉಪವಾಸದಿಂದ ದೇಶವ್ಯಾಪಿ ಹಬ್ಬಿದ ಚಿಂತೆ...'

ಪತ್ರಿಕೆ ಮಾರುವವರ ಧ್ವನಿಯನ್ನು ಕೇಳಿ ಹರಿಲಾಲನ ಕಿವಿಗಳ ತಮಟೆ ಹರಿದು ಹೋದಂತಾಯಿತು, ಅವನು ವೇಗವಾಗಿ ಮುಂದಕ್ಕೆ ಹೋದ. ಮರೆತೂ ಸಹ ಪತ್ರಿಕೆಗಳ ಹೆಡ್‌ಲೈನಿನ ಮೇಲೆ ತನ್ನ ದೃಷ್ಟಿ ಬೀಳಬಾರದೆಂದು ಹರಿಲಾಲ ಮುಖವನ್ನು ಹೊರಳಿಸಿಕೊಂಡು ಎದುರಿನ ಪ್ಲಾಟ್‌ಫಾರ್ಮ್‌ನಲ್ಲಿ ನಿಂತಿದ್ದ ರೈಲನ್ನು ನೋಡಿದ. ರೈಲಿನಲ್ಲಿ ಗುಂಪು ಕಡಿಮೆಯಿತ್ತು. ತಾನು ಯಾವ ದಿಕ್ಕಿಗೆ ಹೋಗಬೇಕು, ಎಲ್ಲಿಗೆ ಹೋಗಬೇಕು ಎಂಬುದು ಅನಿಶ್ಚಿತವಾಗಿತ್ತು. ಬಾಪೂ ಅವರ ಉಪವಾಸದ ಸುದ್ದಿ ಕೇಳಿ ಮೊದಲು ಅವನು ಯಾವ ಪ್ರತಿಕ್ರಿಯೆಯನ್ನು ತಾಳಿದ್ದನೋ, ಅದು ಈಗ ಮಂದವಾಗಿತ್ತು. ಆ ಕ್ಷಣಗಳಲ್ಲಿ ಉಕ್ಕಿದ ಭಾವನೆಗಳು ನಂತರದಲ್ಲಿ ಮರೆಯಾದವು. ಅವನು ಈ ಭಾವನೆಯಲ್ಲಿಯೇ ಆ ಪತ್ರವನ್ನು ಬರೆದಿದ್ದ. ಈಗ ಆ ಪತ್ರವನ್ನು ನೆನೆದು ಹರಿಲಾಲನಿಗೆ ಕೆಡುಕೆನಿಸಿತು. ಬಾಪೂ ಅವರು ಆತ್ಮಶುದ್ಧಿಗೆ ಉಪವಾಸವನ್ನು ಮಾಡುವುದಾದರೆ ಅಗತ್ಯವಾಗಿ ಮಾಡಲಿ. ಅವರು ಆತ್ಮಶುದ್ಧಿಯನ್ನು ಮಾಡಿಕೊಳ್ಳಬೇಕು.

ತನ್ನೊಂದಿಗೆ ಮತ್ತು ಪರಿವಾರದ ಸದಸ್ಯರೊಂದಿಗೆ ಬಾಪೂ ಅವರು ತೋರಿದ ವರ್ತನೆ ನಿಶ್ಚಿತವಾಗಿಯೂ ಉಪವಾಸಕ್ಕೆ ಯೋಗ್ಯವಾಗಿದೆ. ಬ್ಯಾರಿಸ್ಟರ್ ವಿದ್ಯಾಭ್ಯಾಸದಿಂದ ಹಿಡಿದು ಬಾಪೂ ಅವರು 'ನವಜೀವನ'ದಲ್ಲಿ ತನ್ನ ಲೇವಾದೇವಿಯ ವಿಷಯದಲ್ಲಿ ಸಾರ್ವಜನಿಕರಿಗೆ ಬರೆದ ಲೇಖನಗಳು.. ಎಲ್ಲವೂ ಅವನೆದುರು ಹಸುರಾದವು. ಈ ಘಟನೆಗಳು ಮತ್ತೊಮ್ಮೆ ಅವನನ್ನು ಬಾಪೂ ಅವರಿಂದ ದೂರ ಹೋಗಲು ಪ್ರೇರೇಪಿಸುತ್ತಿದ್ದವು. ತನ್ನ ಹಿಂದಿನ ಪತ್ರಕ್ಕೆ ಬಾಪೂ ಅವರು ಉತ್ತರಿಸಿದ ರೀತಿಯನ್ನು ಗಮನಿಸಿದಾಗ ಭಯವಾಯಿತು. ತನ್ನನ್ನು ಕರೆದೊಯ್ಯಲು ನಿಜಾಮಿಯಾ ಹೊಟೇಲ್‌ಗೆ ಬಹುಶಃ ಯಾರೂ ಬರಲಾರರು. ಈ ಮಾನಸಿಕ ಭಯದಿಂದ ಅವನು ಪ್ಲಾಟ್‌ಫಾರ್ಮ್‌ನಲ್ಲಿದ್ದ ಗುಂಪನ್ನು ನೋಡಿದ. ಇಲ್ಲಿ ಪರಿಚಿತರು ತನ್ನನ್ನು ನೋಡಿದರೆ...

ಹರಿಲಾಲ ಎದುರಿಗೆ ನಿಂತಿದ್ದ ರೈಲನ್ನು ನೋಡಿದ. ಆ ರೈಲು ಹೈದರಾಬಾದ್‌ಗೆ ಹೋಗುತ್ತಿತ್ತು. ಅಕಸ್ಮಾತ್ ಅವನಿಗೆ ಹೈದರಾಬಾದಿನಿಂದ ಇತ್ತೀಚೆಗೆ ಬಂದಿದ್ದ ಹಾಗೂ ನಿಜಾಮಿಯಾ ಹೊಟೇಲ್‌ನಲ್ಲಿ ಅವನೊಂದಿಗಿದ್ದ ಅಬ್ಬಾಸ್ ಅಲಿ ಎಂಬ ವ್ಯಾಪಾರಿಯ ನೆನಪಾಯಿತು. ಅಲ್ಲಿ ಅವನಿಗೂ ಅಬ್ಬಾಸ್ ಅಲಿಗೂ ಹೊಸ ಪರಿಚಯವಾಗಿತ್ತು. ಆದರೆ ಅಬ್ಬಾಸ್ ಅಲಿಗೆ ಈ ಮೊದಲೇ ಹರಿಲಾಲನ ಬಗ್ಗೆ ತಿಳಿದಿತ್ತು. ಬಾಪೂ ಅವರ ಮಗನಾಗಿ ಹರಿಲಾಲನ ಪರಿಚಯವಂತೂ ಇತ್ತು, ಅಲ್ಲದೆ ಅಬ್ಬಾಸ್ ಅಲಿಯ ಪೂರ್ವಿಕರು ಸೌರಾಷ್ಟ್ರಕ್ಕೆ ಸೇರಿದವರಾಗಿದ್ದರು. ಅವನಿಗೆ ಬಾಪೂ ಸಹ ತಮ್ಮ ಪ್ರದೇಶದವರು ಎಂಬ ಅಭಿಮಾನವಿತ್ತು. ಈ ನಡುವೆ ಹರಿಲಾಲನೊಂದಿಗೆ ಭೇಟಿಯಾಯಿತು, ಮೂರ್ನಾಲ್ಕು ದಿನಗಳು ಹರಿಲಾಲನೊಂದಿಗೂ ಇರಬೇಕಾಯಿತು. ಅಬ್ಬಾಸ್ ಅಲಿ ಮಾತಿನ ಮಧ್ಯೆ ಹೇಳಿದ್ದ, 'ಹರಿಲಾಲ್, ನಾನೊಬ್ಬ ಸಾಮಾನ್ಯ ವ್ಯಾಪಾರಿ, ಒಂದು ವೇಳೆ ಎಂದಾದರು ನನ್ನ ಆತಿಥ್ಯವನ್ನು ನೀನು ಸ್ವೀಕರಿಸಿದರೆ ನನಗೆ ತುಂಬಾ ಸಂತೋಷವಾಗುವುದು.'

ಹೈದರಾಬಾದ್‌ಗೆ ಹೋಗುವ ರೈಲನ್ನು ನೋಡಿದೊಡನೆಯೇ ಹರಿಲಾಲನಿಗೆ ಅಬ್ಬಾಸ್ ಅಲಿಯ ಆ ಆಮಂತ್ರಣ ನೆನಪಾಯಿತು. ಸ್ವಲ್ಪವೂ ಹಿಂದುಮುಂದು ಯೋಚಿಸದೆ ಹರಿಲಾಲ ಹೈದರಾಬಾದಿಗೆ ಹೋಗುವ ರೈಲನ್ನು ಹತ್ತಿದ.

ಹರಿಲಾಲನಿಗೆ ಔಪಚಾರಿಕವಾಗಿ ಹೇಳಿದ ಮಾತನ್ನು ಅವನು ಆಹ್ವಾನವೆಂದು ತಿಳಿದು ಇಷ್ಟು ಬೇಗ ತನ್ನ ಮನೆಗೆ ಬರುತ್ತಾನೆ ಎಂದು ಅಬ್ಬಾಸ್ ಅಲಿ ಕನಸಿನಲ್ಲೂ ಯೋಚಿಸಿರಲಿಲ್ಲ. ಅವನು ಹರಿಲಾಲನನ್ನು ಸ್ವಾಗತಿಸಿದ, ಆದರೆ ವಾಸ್ತವವಾಗಿ ಅವನು ಹೇಳಿದ ಪರಿಚಯ ತಪ್ಪಾಗಿತ್ತು. ಅವನು ಸಾಮಾನ್ಯ ವ್ಯಾಪಾರಿಯಾಗಿದ್ದ. ಅವನ ಮನೆಯಲ್ಲೂ ಸಹ, ಹರಿಲಾಲನಿಗೆ ಹೆಚ್ಚು ದಿನಗಳು ಉಳಿಯುವಂತೆ ಒತ್ತಾಯಿಸಲು ಯಾವುದೇ ಅನುಕೂಲಗಳಿರಲಿಲ್ಲ.

ಅಲ್ಲದೆ ಅವನು ಹರಿಲಾಲನ ಜೀವನಶೈಲಿಯನ್ನೂ ಸಹ ಸಮೀಪದಿಂದ ನೋಡಿದ್ದ. ಹರಿಲಾಲ ಬಾಪೂ ಅವರ ಮಗ, ಅಲ್ಲದೆ ಬಾಪೂ ಅವರು ತಮ್ಮ ಪ್ರದೇಶಕ್ಕೆ ಸೇರಿದವರು ಎಂಬ ಭಾವನೆಯಿಂದ ಮಾತ್ರ ಹರಿಲಾಲನನ್ನು ತನ್ನ ಮನೆಯಲ್ಲಿಟ್ಟುಕೊಂಡ. ಅವನು ವಾಸಿಸುವ ಸ್ಥಳದ ಹೊರಗಿನ ರಸ್ತೆಯಲ್ಲಿದ್ದ ಬಜಾರಿನಲ್ಲಿ ಅಂಗಡಿಯಿತ್ತು. ಅಬ್ಬಾಸ್ ಅಲಿ ಆ ಅಂಗಡಿಯ ಒಂದು ಭಾಗದಲ್ಲಿ ಹರಿಲಾಲ ಮಲಗಲು ವ್ಯವಸ್ಥೆಯನ್ನು ಮಾಡಿದ.

**(ಸಶೇಷ)**